## ನನ್ನ ಓದು




ತಿರುವುಗಳಿಂದ ಕೂಡಿದೆ. ಲಕ್ಷ್ಮೀನರಸಿಂಹಸ್ವಾಮಿಯ ಹೂವಿನ ಪಲ್ಲಕ್ಕಿ ದಿನ ಹುಟ್ಟಿ, ಸಿನಿಮಾ- ಅದರಲ್ಲೂ ರಾಜ್‌ಕುಮಾರರ ಸಿನಿಮಾ- ನೋಡಲೆಂದೇ ಶಾಲೆಯನ್ನೇ ಬಿಟ್ಟ ಭೂಪ ಈತ.

ಈತನ ಅಂತಃಕರಣದ ವ್ಯಕ್ತಿತ್ವಕ್ಕೆ ಒಂದು ಉದಾಹರಣೆ ಕೊಡಬೇಕು. ತಾಯಿ ಬಾಣಂತಿಯಾದಾಗ ಆರೇಳು ವರ್ಷದ ಹುಡುಗ ಈತ. ಮನೆಯಲ್ಲಿ ಶೌಚಾಲಯ ಇಲ್ಲದ್ದರಿಂದ ಹೊರಗೆ ಹೋಗಲಾರದೆ ತಾಯಿ ಊಟ- ತಿಂಡಿಯನ್ನೇ ಬಿಟ್ಟು ಬಿಡುತ್ತಾರೆ. ಈ ಹುಡುಗ ಮಂಕರಿಯಲ್ಲಿ ಭತ್ತದ ಹುಲ್ಲು ತುಂಬಿ ಇಟ್ಟರೆ, ತಾಯಿ ಅದರಲ್ಲಿ ಪಾಯಖಾನೆ ಮಾಡುತ್ತಿದ್ದರು. ಈತ ಆಮೇಲೆ ಅದನ್ನು ಹೊತ್ತುಕೊಂಡು ಹೋಗಿ ಹೊರಕ್ಕೆ ಬಿಸಾಡಿ ಬರುತ್ತಿದ್ದ. ಇಂಥ ಅದೆಷ್ಟೋ ಪ್ರಸಂಗಗಳನ್ನು ಈ ಕೃತಿಯಲ್ಲಿ ಅನೇಕರು ಹೇಳುತ್ತಾರೆ. ಇಂತಹವುಗಳನ್ನು ಓದಿದಾಗ, ಯಾವ ಕಾಲದಲ್ಲಿದ್ದೇವೆ ನಾವು, ನಮಗೆ ಬದುಕಿನ ಈ ವಾಸ್ತವಗಳೇ ಗೊತ್ತಿಲ್ಲವಲ್ಲ ಎನ್ನಿಸಿ ಕಲಮಲವಾಗುತ್ತದೆ. ಇನ್ನೊಂದು ಪ್ರಸಂಗ: ಊರಿನ ಮೇಲ್ಜಾತಿಯವರ ಮನೆಯಲ್ಲಿ ಏನಾದರೂ ಕಾರ್ಯಕ್ರಮಗಳಾದಾಗ ಮಾತ್ರ ಇವರಿಗೆ ಒಳ್ಳೆಯ ಊಟ. ಅದೂ ಅವರು ಉಳಿಸಿದರೆ ಮಾತ್ರ. ಅಥವಾ ಉಳಿದದ್ದು. ಒಮ್ಮೆ ಆ ಭೂರಿ ಭೋಜನದ ಪಾಯಸದಲ್ಲಿ ಏನೋ ಕಾರದ ಪದಾರ್ಥ ಬಿದ್ದು ಕೆಟ್ಟುಹೋಗುತ್ತದೆ. ಅದನ್ನೆಲ್ಲ ಇವರಿಗೆ 'ತೆಗೆದುಕೊಂಡು ಹೋಗಿ' ಎಂದು ಹೇಳುತ್ತಾರೆ. ತುಂಬಿಕೊಂಡು ಹೋಗಲು ಇದ್ದವರು ಪಾತ್ರೆಪಗಡ ಒಯ್ದರು. ಇಲ್ಲದವರು ಒದ್ದಾಡುತ್ತಿರುವಾಗಲೇ ಏನೋ ಹೊಳೆದು ತಿಪ್ಪೆಗೆ ಹೋಗಿ ಅಲ್ಲಿದ್ದ ತೆಂಗಿನ ಕಾಯಿಯ ಕರಟಗಳನ್ನು ತಂದು, ಅದರಲ್ಲಿ ಮೆತ್ತಿದ್ದ ಸಗಣಿ ಇತ್ಯಾದಿಗಳನ್ನೂ ಗಮನಿಸದೆ ಪಾಯಸ ತುಂಬಿಕೊಂಡು ಕುಡಿಯುತ್ತಾರೆ. ಇಂಥ ಬದುಕನ್ನು ಬೆನ್ನಿಗೆ ಕಟ್ಟಿಕೊಂಡ ಈ ಕಲಾವಿದರು ತಾವೇ ಗೊಬ್ಬರವಾಗಿ ಕಲೆಯ ಹೂವನ್ನು, ಅದರ ಪರಿಮಳವನ್ನು ಮಾತ್ರ ಲೋಕಕ್ಕೆಲ್ಲ ಹರಡುತ್ತಾರೆ.

'ರಾಜಧಾನಿಯಲ್ಲೊಬ್ಬ ನೀಲಗಾರ' ನಿರೂಪಣೆಯ ಕೋಣನಕೊಪ್ಪಲು ಸಿದ್ದರಾಜು ಒಂದು ಅದ್ಭುತವಾದ ಕಾಣ್ಕೆಯ ಮಾತುಗಳನ್ನಾಡುತ್ತಾರೆ: 'ದೇವ್ರ ಮುಂದೆ ದೇವ್ರಾಗ್ಬೇ ಬಿಡಬೇಕು'. ನುಂಗಿನೊಣೆಯುತ್ತಿರುವ ಬದುಕಿನ ಸವಾಲುಗಳನ್ನೆಲ್ಲ ನುಂಗಿಯೋ, ಜೀರ್ಣಿಸಿ ಕೊಂಡೋ, ಮರೆತೋ, ಪಕ್ಕಕ್ಕೆ ಸರಿಸಿಯೋ, ಕಲಾವಿದನಾದ ಗಳಿಗೆಯಲ್ಲಿ ಈ ಎಲ್ಲವನ್ನೂ ಮೀರಿಕೊಂಡು ಬಿಡಬೇಕು ಎನ್ನುವ ದರ್ಶನ ಈ ಕಲಾವಿದರಿಗಿದೆಯಲ್ಲ, ಇದು ಕಲೆಯ ಶಕ್ತಿಯೋ ಕಲಾವಿದರ ಶಕ್ತಿಯೋ! ಎರಡೂ ಹೌದು ಎನ್ನುವುದನ್ನು ಒಪ್ಪಿದಾಗಲೂ ಕಲಾವಿದರದ್ದೇ ಒಂದು ಕೈ ಮೇಲು ಎನ್ನಿಸುತ್ತದೆ. ಬದುಕಿನ ಈ ಅಪರಂಪಾರ ಸಾಗರವನ್ನು ಈಜಲೆಂದೇ ಇವರು ಕಲೆಯ ಮೊರೆಹೋದರರೋ ಏನೋ.

ಮಂಟೇಸ್ವಾಮಿಯಾಗಲೀ, ಮಹದೇಶ್ವರ ಸ್ವಾಮಿಯಾಗಲೀ ಪ್ರತಿನಾಯಕರೇ. ಶಿಷ್ಟ ಸಂಸ್ಕೃತಿಯನ್ನು ಎಲ್ಲ ರೀತಿಯಲ್ಲೂ ಪ್ರತಿಭಟಿಸಿ ಗೆದ್ದವರು. ಶಿಷ್ಟ ಸಂಸ್ಕೃತಿಯೆದುರು ಮೂಲ ಸಂಸ್ಕೃತಿಯನ್ನು ಘನವಾಗಿ ಸ್ಥಾಪಿಸಿದವರು. ಬಸವಣ್ಣನಂತಹ ಬಸವಣ್ಣನನ್ನು ಎದುರಿಸಿ ಗೆದ್ದ ಪರಂಪರೆ ಮಂಟೇಸ್ವಾಮಿಯದು. ಈ ಪರಂಪರೆಯವರ ಮನೋವಿನ್ಯಾಸವನ್ನೇ ಬದುಕಿಗೆ ಅಳವಡಿಸಿಕೊಂಡವರಿವರು ಎನ್ನುವುದು ಈ ನಿರೂಪಣೆಗಳಲ್ಲಿ ಮತ್ತೆಮತ್ತೆ ಸ್ಥಾಪಿತವಾಗುತ್ತದೆ.

ಬಿಸಿಲು ನಾಯಕ ಹೇಳುವ ಈ ಮಾತುಗಳನ್ನು ಗಮನಿಸಿ:

'ಇನ್ನೇನ ಸಾ. ಆರೋಗ್ಯ, ಅಭ್ಯಾಸ ಹಾಡುಗಾರ್ಕೆ,